# ಕ್ರಿಸ್ತವಿರೋಧಿಯ
## ಕುರಿತು ಅಧ್ಯಯನ

ಭಾಗ – 1

ಅಧ್ಯಯನ # 35



## ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

“ನಿನ್ನ ವಾಕ್ಯವೇ ಸತ್ಯವು” - ಯೋಹಾನನು 17:17

# ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

## ಅಧ್ಯಯನ # 35

## ಕ್ರಿಸ್ತವಿರೋಧಿಯ ಕುರಿತು ಅಧ್ಯಯನ ಭಾಗ-1

<u>ದಯವಿಟ್ಟು ಗಮನಿಸಿ:</u> ಈ ತರಗತಿಯಲ್ಲಿ ತಿಳಿಸಲಾಗಿರುವ ಎಲ್ಲಾ ವಾಕ್ಯಗಳನ್ನು ಸತ್ಯವೇದದಲ್ಲಿ ಓದುವ ಮೂಲಕ ನಿಮ್ಮ ಅಭ್ಯಾಸವನ್ನು ಮುಂದುವರಿಸಿರಿ.


ಇಲ್ಲಿ ಉಪಯೋಗಿಸಿರುವ ಅತ್ಯಧಿಕವಾದ ವಾಕ್ಯಭಾಗಗಳು(ಕೆ.ಜೆ.ವಿ) ಭಾಷಾಂತರದಿಂದ ತೆಗೆದುಕೊಳ್ಳಲಾಗಿದೆ.

ಇಂದು ನಾವು "ಕ್ರಿಸ್ತವಿರೋಧಿ"ಯ ಕುರಿತು ಅಭ್ಯಾಸ ಮಾಡಲಿದ್ದೇವೆ!

ಇದು ಆಸಕ್ತಿಯಿಂದ ಕೂಡಿದ್ದು ಎಲ್ಲಾ ಕ್ರೈಸ್ತರಿಗೂ ಕುತೂಹಲ ಕಾರಿಯಾದ ವಿಷಯವಾಗಿದೆ!

"ಕ್ರಿಸ್ತವಿರೋಧಿ"ಯ ಕುರಿತು ಅನೇಕ ವಿಚಾರಗಳಿವೆ.

ಸಾಮಾನ್ಯವಾದ ತಿಳುವಳಿಕೆ ಇರುವದೇನೆಂದರೆ.....
ಕ್ರಿಸ್ತವಿರೋಧಿಯು ಒಬ್ಬ ವ್ಯಕ್ತಿಯಾಗಿದ್ದು
ಸೈತಾನನಪ್ರತಿರೂಪವಾಗಿದ್ದಾನೆ, ಯೆರುಸಲೇಮನ್ನು
ಹತೋಟಿಯಲ್ಲಿಡುತ್ತಾನೆ ಮತ್ತು......
ಹಾಳಾದ ಆಲಯಗಳನ್ನುಮತ್ತೆ ಕಟ್ಟುತ್ತಾನೆ..... ಮತ್ತು ಇಡೀ
ಲೋಕವನ್ನು ನಿಧಾನವಾಗಿ "ಅಧಿಕಾರ ಮಾಡುತ್ತಾನೆ" ಮತ್ತು 7
ವರ್ಷಗಳ ಕಾಲ ಆಳ್ವಿಕೆ ಮಾಡುತ್ತಾನೆ!



**ಈ ದಿನಗಳಲ್ಲಿ ಒಬ್ಬ ಮನುಷ್ಯನು ಇಡೀ ಲೋಕವನ್ನು ಆಳ್ವಿಕೆ ಮಾಡುವುದನ್ನು ಕುರಿತು ಯೋಚನೆ ಮಾಡಿರಿ!**

ನಂತರ ಕ್ರಿಸ್ತವಿರೋಧಿಯು ಒಬ್ಬ ಪ್ರತ್ಯೇಕ ವ್ಯಕ್ತಿಯೆಂಬ ವಿಚಾರವು ಹೆಸರಾಂತವಾಗುವಂತೆ ಮಾಡಿದ ಆಂಗ್ಲಚಿತ್ರಣಗಳಾದ "ಎಕ್ಸಾರ್ಸಿಸ್ಟ್" **(exorcist)** ಮತ್ತು "ಓಮೆನ್" **(Omen)** ಚಿತ್ರಗಳನ್ನು ತಯಾರಿಸಲಾಯಿತು.

ಮತ್ತು ಮಾರುಕಟ್ಟೆಗಳಲ್ಲಿ ಉಚಿತವಾಗಿ ಸಿಗುವಂತಹ ಅನೇಕ ಪುಸ್ತಕಗಳನ್ನು ಸಹ ಬರೆಯಲಾಯಿತು!

ಮತ್ತು ಇದಕ್ಕೆ ಕ್ರಿಸ್ತವಿರೋಧಿಯ ಮುದ್ರೆಯಾದ **"666"**ರನ್ನು ಎಲ್ಲರ ಕೈಗಳಲ್ಲಿ ಮತ್ತು ಹಣೆಗಳಲ್ಲಿ ಹಾಕಲಾಗುವದು ಎಂಬ ವಿಷಯಗಳನ್ನು ಸೇರಿಸಲಾಯಿತು!!




ಈ ದಿನಗಳಲ್ಲಿ **"666"** ಗುರುತನ್ನು ಕಂಪ್ಯೂಟರ್ ಚಿಪ್ ಗಳ ಮುಖಾಂತರ ಕೈಗಳ ಮತ್ತು ಹಣೆಗಳ ಚರ್ಮದೊಳಗೆ ಹುದುಗಿಸಲಾಗುವದು ಎಂದು ಅನೇಕರು ಅಂದುಕೊಂಡಿದ್ದಾರೆ!

......ಕೆಲವರು ಸಲಹೆನೀಡುವದೇನೆಂದರೆ ಅದು ಕ್ರೆಡಿಟ್ ಕಾರ್ಡ್ ವ್ಯವಸ್ಥೆಯ ಮುಖಾಂತರ,


ಅದರಲ್ಲಿರುವ ಬಾರ್ಕೋಡ್ ಸಂಖ್ಯೆಯನ್ನು ಸೇರಿಸಿದಾಗ ಅದು **666** ಆಗುತ್ತದೆ!!




**ಹೌದು! ಈ 666ರ ಗುರುತಿನ ಬಗ್ಗೆ ಅನೇಕ ವಿಚಾರಗಳಿವೆ.**

ಈ ದಿನಗಳಲ್ಲಿ ಕ್ರಿಸ್ತವಿರೋಧಿಯನ್ನು ಕುರಿತು ಅಧಿಕ ಆಸಕ್ತಿ ಮತ್ತು ಕುತೂಹಲವಿದೆ ಮತ್ತು ಅದು ಬೆಳೆಯುತ್ತಲೇ ಇದೆ ಮತ್ತು ಅನೇಕರು ಈ "ಅಂತ್ಯಕಾಲಗಳು" ಎಂದು ಕರೆಯಲ್ಪಡುವ ದಿನಗಳಲ್ಲಿ ಕ್ರಿಸ್ತವಿರೋಧಿಯನ್ನು ಎದುರು ನೋಡುತ್ತಿದ್ದಾರೆ!

**ಕೆಲವರು ಹಿಟ್ಲರನನ್ನು ಕ್ರಿಸ್ತವಿರೋಧಿ ಅಂದುಕೊಂಡಿದ್ದರು!**




ನಾಜ್ಹಿ ಸಾಮ್ರಾಜ್ಯವನ್ನು ವಿಸ್ತರಿಸಿ ಇಡೀ ಲೋಕವನ್ನು ವಶಪಡಿಸುವ ಆತನ ಎಲ್ಲಾ ಮಹತ್ವಾಕಾಂಕ್ಷೆ ಮತ್ತು ಎರಡನೆಯ ಮಹಾ ಯುದ್ಧದಲ್ಲಿ ಆತನು ಉಪಯೋಗಿಸಿದ ಅತ್ಯಧಿಕ ಬಲವು ಅನೇಕರಿಗೆ ಆ ಯೋಚನೆಯನ್ನು ಉಂಟುಮಾಡಿತು.

ಆದರೆ ಹಿಟ್ಲರ್ ಬಂದನು ಮತ್ತು ಹೊರಟುಹೋದನು (ಸತ್ತನು) ಮತ್ತು ಈ ಲೋಕವು ಹಾಗೆಯೇ ಮುಂದುವರಿಯುತ್ತಿದೆ......!

ನಂತರ 1980ರ ನಂತರ ಉಂಟಾದ ಯೋಚನೆ ಏನೆಂದರೆ...... ಇರಾಖಿನ (ಮೊದಲು ಬ್ಯಾಬಿಲೋನ್ ಎಂದು ಕರೆಯಲಾಗುತ್ತಿತ್ತು) ರಾಷ್ಟ್ರಪತಿಯಾಗಿದ್ದ ಸದ್ಧಾಮ್ ಹುಸೇನ್ನನ್ನು ಆ ಕ್ರಿಸ್ತವಿರೋಧಿ ಅಂದುಕೊಂಡಿದ್ದರು.

ಕುವೈತನ್ನು ಮುತ್ತುಗೆ ಹಾಕಿದಾಗ ಆ ಯೋಚನೆಗೆ ಅಧಿಕ ಬಲ ಉಂಟಾಯಿತು.

ಆದರೆ 10 ವರ್ಷಗಳ ನಂತರ ಏನಾಯಿತು?



ನಂತರ "ಬಿಲದಲ್ಲಿದ್ದ ಇಲಿ" ಯಂತೆ ಹಿಡಿಯಲ್ಪಟ್ಟನು.
ಇದರಿಂದ ಸದ್ಧಾಮ್ ಹುಸ್ಸೇನ್ ಸಹ ಕ್ರಿಸ್ತವಿರೋಧಿಯಲ್ಲ ಎಂದು ಸ್ಪಷ್ಟವಾಗುತ್ತದೆ!



ಕೆಲವರ ಅಭಿಪ್ರಾಯ ಏನೆಂದರೆ **ಒಸಾಮ ಬಿನ್ ಲ್ಯಾಡೆನ್** ಆ ಕ್ರಿಸ್ತ ವಿರೋಧಿಯಾಗಿರಬಹುದು – ವಿಶೇಷವಾಗಿ ಅಧಿಕ ಬಲಶಾಲಿಯಾದ ಅಮೇರಿಕದ ಹುಡುಕಾಟದಿಂದ ಆತನು ತಪ್ಪಿಸಿಕೊಂಡಿದ್ದನು. (ಈಗ ಆತನೂ ಸತ್ತುಹೋಗಿದ್ದಾನೆ)

**ನಂತರ ಕೆಲವು ವದಂತಿಗಳು ಮತ್ತು ಕಥೆಗಳು ಇರುವದೇನೆಂದರೆ.**

.... ಕ್ರಿಸ್ತವಿರೋಧಿ ಈಗಾಗಲೇ ಹುಟ್ಟಿದ್ದಾನೆ ಮತ್ತು ರಷ್ಯಾದ ಯಾವುದೋ ಒಂದು ಸ್ಥಳದಲ್ಲಿ ಬೆಳೆಯುತ್ತಿದ್ದಾನೆ ಮತ್ತು...... ಬೇರೆ ಕೆಲವರು ಆತನು ಇಸ್ರೇಲ್ ನಲ್ಲಿದ್ದಾನೆ ಮತ್ತು ಬಹುಬೇಗನೆ ಆತನು ಅಧಿಕಾರದೊಂದಿಗೆ ವ್ಯಕ್ತವಾಗುತ್ತಾನೆ ಅನ್ನುತ್ತಾರೆ!!



## ಈ ಕ್ರಿಸ್ತವಿರೋಧಿಯ ಕುರಿತು ಸತ್ಯವೇನು?

ಪವಿತ್ರ ಗ್ರಂಥವಾದ – ಸತ್ಯವೇದವನ್ನು ಅಭ್ಯಾಸ ಮಾಡಿ, ಅದರಲ್ಲಿ ಹುಡುಕಿದಾಗ ಮಾತ್ರ ಇದನ್ನು ಕಾಣುತ್ತೇವೆ.

ಏಕೆಂದರೆ ಸತ್ಯವೇದದಲ್ಲಿ ಮಾತ್ರ ಕ್ರಿಸ್ತವಿರೋಧಿಯ ವಿಷಯ ಮತ್ತು ವಿಚಾರವನ್ನು ಕಾಣಬಹುದು ಮತ್ತು ಈ ವಿಷಯದ ನಿಜವಾದ ಸತ್ಯ ಅದರಲ್ಲಿ ಮಾತ್ರ ಅಡಗಿದೆ.

ಆದರೆ ಈಗ ವಿಷಯವು ಕ್ರೈಸ್ತರಿಗೆ ಏಕೆ ಮುಖ್ಯತ್ವವಾಗಿದೆ?

ಏಕೆಂದರೆ ಇದರ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**2 ಥೆಸಲೋನಿಕದವರಿಗೆ 2:1-3**

**"ಸಹೋದರರೇ, ನಮ್ಮ ಕರ್ತನಾದ ಯೇಸು ಕ್ರಿಸ್ತನ ಪ್ರತ್ಯಕ್ಷತೆಯ ವಿಷಯವಾಗಿಯೂ ನಾವು ಆತನ ಬಳಿಯಲ್ಲಿ ಕೂಡಿಕೊಳ್ಳುವದರ ವಿಷಯವಾಗಿಯೂ ನಿಮ್ಮನ್ನು ಬೇಡಿಕೊಳ್ಳುವದೇನೆಂದರೆ – ಕರ್ತನ ದಿನವು ಈಗಲೇ ಹತ್ತಿರವಾಯಿತೆಂಬದಾಗಿ ದೇವರಾತ್ಮಪ್ರೇರಿತನಾದ ನುಡಿ ಇದೆ ಎಂದಾಗಲಿ ಪೌಲನು ಹಾಗೆ ಹೇಳಿದನೆಂದಾಗಲಿ ಪೌಲನು ಹಾಗೆ ಬರೆದನೆಂದಾಗಲಿ ಯಾರಾದರೂ ಹೇಳಿದರೂ ನೀವು ಬೇಗನೆ ಬುದ್ಧಿಗೆಟ್ಟು ಚಂಚಲರಾಗಿ ಕಳವಳಪಡಬೇಡಿರಿ ಯಾರೂ ಯಾವ ವಿಧದಲ್ಲಿಯೂ ನಿಮ್ಮನ್ನು ಮೋಸಗೊಳಿಸದಂತೆ ನೋಡಿಕೊಳ್ಳಿರಿ; ಯಾಕೆಂದರೆ ಮೊದಲು ಮತಭ್ರಷ್ಟತೆಯು ಉಂಟಾಗಿ ಅಧರ್ಮಸ್ವರೂಪನು ಬೈಲಿಗೆ ಬಂದ ಹೊರತು ಆ ದಿನವು ಬರುವದಿಲ್ಲ."**

ಹೌದು! ಏಕೆಂದರೆ ಕರ್ತನ ಎರಡನೆಯ ಬರುವಿಕೆಗೆ ಮೊದಲು (ಮುಂಚೆ) "ಅಧರ್ಮ ಸ್ವರೂಪನಾದ" ಕ್ರಿಸ್ತವಿರೋಧಿಯು ಬರಬೇಕು!

ಆಹ್! ಏಕೆಂದರೆ ಎಲ್ಲಾ ಕ್ರೈಸ್ತರೂ ಕರ್ತನ ಎರಡನೆಯ ಬರುವಿಕೆಗೆ ಹಂಬಲಿಸುತ್ತಾ ಮತ್ತು ಎದುರುನೋಡುತ್ತಿರುವವರಿಗೆ ಮನವರಿಕೆಯಾಗಿರುವದೇನೆಂದರೆ ಕ್ರಿಸ್ತವಿರೋಧಿಯು ಮೊದಲು ಬರಬೇಕು – ಆದ್ದರಿಂದ ಕ್ರಿಸ್ತವಿರೋಧಿಯನ್ನು ಕುರಿತು ಅಭ್ಯಾಸ ಮಾಡುವದು ಮತ್ತು ಅರ್ಥಮಾಡಿಕೊಳ್ಳುವದು ಅಷ್ಟು ಮುಖ್ಯವಾಗಿದೆ.

**ಈಗ ನಾವು ಸತ್ಯವೇದವನ್ನು ಓದಿ ಈ ವಿಷಯವನ್ನು ಅಭ್ಯಾಸಿಸೋಣ.**

ಮೊದಲು ಕೆಳಗಿನ ವಾಕ್ಯವನ್ನು ಓದೋಣ –

**ಮತ್ತಾಯ 24:15**

**"ಆದದರಿಂದ ಪ್ರವಾದಿಯಾದ ದಾನಿಯೇಲನು ಹೇಳಿದಂಥ ಹಾಳುಮಾಡುವ ಅಸಹ್ಯವಸ್ತುವು ಪವಿತ್ರಸ್ಥಾನದಲ್ಲಿ ನಿಂತಿರುವದನ್ನು ನೀವು ಕಾಣುವಾಗ (ಇದನ್ನು ಓದುವವನು ತಿಳುಕೊಳ್ಳಲಿ)."**

ಇಲ್ಲಿ ಯೇಸು – **"ಪ್ರವಾದಿಯಾದ ದಾನಿಯೇಲನು ಹೇಳಿದಂಥ ಹಾಳುಮಾಡುವ ಅಸಹ್ಯವಸ್ತುವು ಪವಿತ್ರಸ್ಥಾನದಲ್ಲಿ ನಿಂತಿರುವದನ್ನು"** ಕುರಿತು ಹೇಳುತ್ತಾನೆ.

**"ಹಾಳುಮಾಡುವ ಅಸಹ್ಯ ವಸ್ತು"** ಎಂದರೇನು?

ಇದು ಕ್ರಿಸ್ತವಿರೋಧಿಗೆ ಆತ್ಮೀಕ ಸೂಚಿತವಾಗಿದೆ!

**ಮತ್ತು ಅದು ಒಬ್ಬವ್ಯಕ್ತಿ - "ನಿಂತಿರುವ" ಹಾಗೆ ಹೇಳಲಾಗಿದೆ!!**

ಮತ್ತೆ ನಾವು ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ –

**ದಾನಿಯೇಲನು 7:20-25**

**".....ನಾಲ್ಕನೆಯ ಮೃಗದ ವಿಷಯವಾಗಿಯೂ ಅದರ ತಲೆಯ ಮೇಲಣ ಹತ್ತು ಕೊಂಬುಗಳ ವಿಷಯವಾಗಿಯೂ ನಾನು ನೋಡುತ್ತಿದ್ದ ಹಾಗೆ ಯಾವ ಕೊಂಬು ಮೊಳೆತು ಮೂರು ಕೊಂಬುಗಳನ್ನು ಬೀಳಿಸಿ ದೇವಭಕ್ತರೊಂದಿಗೆ ಯುದ್ಧಮಾಡಿ ಮಹಾವೃದ್ಧನು ಅಯ್ತಂದು ಪರಾತ್ಪರನ ಭಕ್ತರಿಗಾಗಿ ನ್ಯಾಯತೀರಿಸಿ ಅವರಿಗೆ ರಾಜ್ಯವನ್ನು ದೊರಕಿಸುವ ತನಕ ಅವರನ್ನು ಗೆಲ್ಲುತ್ತಾ ಬಂದು ಕಣ್ಣುಳ್ಳದ್ದಾಗಿ ಬಾಯಿಂದ ಒಡಾಯಿಕೊಚ್ಚಿಕೊಳ್ಳುತ್ತಾ ಮಿಕ್ಕ ಕೊಂಬುಗಳಿಗಿಂತ ಬಿರಸಾಗಿ ನೋಡುತ್ತಾ ಇತ್ತೋ ಆ ಕೊಂಬಿನ ವಿಷಯವಾಗಿಯೂ ಸತ್ಯಾರ್ಥವನ್ನು ತಿಳಿದುಕೊಳ್ಳಬೇಕೆಂದು ಅಪೇಕ್ಷಿಸಿ ವಿಚಾರಿಸಿದೆನು. ಆಗ ಅವನು ನನಗೆ – ಆ ನಾಲ್ಕನೆಯ ಮೃಗವು ಲೋಕದಲ್ಲಿ ಉಂಟಾಗುವ ನಾಲ್ಕನೆಯ ರಾಜ್ಯ; ಅದು ಮಿಕ್ಕ ರಾಜ್ಯಗಳಿಗಿಂತ ವಿಲಕ್ಷಣವಾಗಿ ಲೋಕವನ್ನೆಲ್ಲಾ ನುಂಗಿ ತುಳಿದು ಚೂರುಚೂರು ಮಾಡುವದು. ಆ ಹತ್ತು ಕೊಂಬುಗಳವಿಷಯವೇನಂದರೆ ಅ ರಾಜ್ಯದಲ್ಲಿ ಹತ್ತು ಮಂದಿ ಅರಸರು ಉಂಟಾಗುವರು; ಅವರ ತರುವಾಯ ಮತ್ತೊಬ್ಬನು ತಲೆದೋರುವನು; ಅವನು ಮುಂಚಿನ ಅರಸರಿಗಿಂತ ವಿಲಕ್ಷಣನಾಗಿ ಮೂವರು ಅರಸರನ್ನು ಅದಮಿಬಿಡುವನು. ಪರಾತ್ಪರನಿಗೆ ವಿರುದ್ಧವಾಗಿ ಕೊಚ್ಚಿಕೊಂಡು ಪರಾತ್ಪರನ ಭಕ್ತರನ್ನು ಸವೆಯಿಸಿ ಕಟ್ಟಳೆಯ ಕಾಲಗಳನ್ನೂ ಧರ್ಮವಿಧಿಗಳನ್ನೂ ಮಾರ್ಪಡಿಸಲು ಮನಸ್ಸುಮಾಡುವನು; ಆ ಭಕ್ತರು ಒಂದುಕಾಲ ಎರಡುಕಾಲ ಅರ್ಧಕಾಲ ಅವನ ಕೈವಶ ವಾಗಿರುವರು."**

**ಈ "ಕೊಂಬು" ಅಥವಾ ಅರಸನು ಯಾರು?**

ಇದು ಕ್ರಿಸ್ತವಿರೋಧಿಯನ್ನು ಸೂಚಿಸುತ್ತದೆ!

**ಮತ್ತೆ ಕ್ರಿಸ್ತವಿರೋಧಿಯನ್ನು ಒಬ್ಬ ವ್ಯಕ್ತಿ - ರಾಜನಾಗಿ ಸೂಚಿಸಲಾಗಿದೆ!**

ಮತ್ತೆ ನಾವು ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ......

**2 ಥೆಸಲೋನಿಕದವರಿಗೆ 2:3-4**

**"ಯಾರೂ ಯಾವ ವಿಧದಲ್ಲಿಯೂ ನಿಮ್ಮನ್ನು ಮೋಸಗೊಳಿಸದಂತೆ ನೋಡಿಕೊಳ್ಳಿರಿ; ಯಾಕಂದರೆ ಮೊದಲು ಮತಭ್ರಷ್ಟತೆಯು ಉಂಟಾಗಿ ಅಧರ್ಮಸ್ವರೂಪನು ಬೈಲಿಗೆ ಬಂದ ಹೊರತು ಆ ದಿನವು ಬರುವದಿಲ್ಲ. ಯಾವದು ದೇವರೆನಿಸಿಕೊಳ್ಳುತ್ತದೋ ಯಾವದು ಪೂಜೆ ಹೊಂದುತ್ತದೋ ಅದನ್ನೆಲ್ಲಾ ನಾಶನಕ್ಕೆ ಅಧೀನನಾದ ಆ ಪುರುಷನು ಎದುರಿಸಿ ಅದಕ್ಕಿಂತ ಮೇಲಾಗಿ ತನ್ನನ್ನು ತಾನೇ ಹೆಚ್ಚಿಸಿಕೊಂಡು ತಾನು ದೇವರೆಂದು ಹೇಳಿಕೊಂಡು ದೇವರ ಗರ್ಭಗುಡಿಯಲ್ಲೇ ಕೂತುಕೊಳ್ಳುತ್ತಾನೆ."**


**ಯಾರು ಈ "ಅಧರ್ಮಸ್ವರೂಪನು"?**

**ಇಲ್ಲಿಯೂ ಸಹ ಕ್ರಿಸ್ತವಿರೋಧಿಯನ್ನು ಒಬ್ಬ ವ್ಯಕ್ತಿಯಾಗಿ ಸೂಚಿಸಲಾಗಿದೆ – 'ಅಧರ್ಮಸ್ವರೂಪನು"**

ಮೇಲೆ ಸೂಚಿಸಿರುವ ಎಲ್ಲಾ ಸತ್ಯವೇದದ ವಾಕ್ಯಗಳು ಕ್ರಿಸ್ತವಿರೋಧಿಯನ್ನು ಒಬ್ಬ ಪ್ರತ್ಯೇಕ ವ್ಯಕ್ತಿ – ಒಬ್ಬ ರಾಜ ಎಂದು ತೋರುತ್ತದೆ!

## ಇದನ್ನು ನಾವು ತೀರ್ಮಾನವಾಗಿ ತೆಗೆದುಕೊಳ್ಳಬೇಕೆ?

ಇದನ್ನು ನಮ್ಮ ಮನಸ್ಸಿನಲ್ಲಿ ತೀರ್ಮಾನವಾಗಿ ತೆಗೆದುಕೊಳ್ಳುವದಕ್ಕೆ ಮುಂಚೆ, ಸತ್ಯವೇದದ ಇನ್ನೊಂದು ವಾಕ್ಯವನ್ನು ಓದೋಣ –




**1 ಯೋಹಾನ 2:18**

**"ಮಕ್ಕಳಿರಾ, ಇದು ಕಡೇ ಗಳಿಗೆಯಾಗಿದೆ; ಕ್ರಿಸ್ತವಿರೋಧಿ ಬರುತ್ತಾನೆಂದು ನೀವು ಕೇಳಿದ್ದೀರಷ್ಟೆ; ಈಗಲೂ ಕ್ರಿಸ್ತವಿರೋಧಿಗಳು ಬಹುಮಂದಿ ಎದ್ದಿದ್ದಾರೆ; ಇದರಿಂದ ಇದು ಕಡೇ ಗಳಿಗೆಯಾಗಿದೆ ಎಂದು ತಿಳುಕೊಳ್ಳುತ್ತೇವೆ."**

**ಇದನ್ನು ನೀವು ನೋಡಿದಿರಾ?? ಇದೊಂದು ಆಶ್ಚರ್ಯವನ್ನು ಉಂಟುಮಾಡುವ ಹೇಳಿಕೆಯಾಗಿದೆ**

"ಈಗಲೂ ಕ್ರಿಸ್ತವಿರೋಧಿಗಳು ಬಹುಮಂದಿ ಎದ್ದಿದ್ದಾರೆ"



## ಇದು ಯಾರಾಗಿರಬಹುದು?

ಕ್ರಿಸ್ತವಿರೋಧಿಯು ಒಬ್ಬ ವ್ಯಕ್ತಿ ಅಥವಾ "ರಾಜ"ನಾಗಿದ್ದು ಭವಿಷ್ಯದಲ್ಲಿ ಆತನು "ಬರುವನು" ಅಂದುಕೊಂಡಿರಲಾಗಿತ್ತು ಮತ್ತು ಅಪೋಸ್ತಲನಾದ ಯೋಹಾನನು ಅನೇಕ ಕ್ರಿಸ್ತವಿರೋಧಿಗಳು ಆದಿ ಸಭೆಯಲ್ಲಿಯೇ, ಸುಮಾರು **2000** ವರ್ಷಗಳ ಹಿಂದೆಯೇ ಇದ್ದಾರೆ ಎಂದು ಹೇಳುತ್ತಾನೆ!

## ಇವೆಲ್ಲವೂ ಬಹಳ ಗೊಂದಲ ಮತ್ತು ಪರಸ್ಪರ ವಿರೋಧವಾಗಿ ಕಾಣುತ್ತದೆ!

**ಆದರೆ ಎಲ್ಲಾ ವಾಕ್ಯಗಳು ಸತ್ಯವೇದದಲ್ಲಿರುವದು ಎಂದು ನಾವು ನೆನಪಿನಲ್ಲಿಟ್ಟುಕೊಳ್ಳೋಣ!**

ಮತ್ತು ನಮಗೆ ಗೊತ್ತಿದೆ "ನಿನ್ನ ವಾಕ್ಯವೇ ಸತ್ಯವು" (**ಯೋಹಾನ 17:17**)

ಹಾಗಾದರೆ ಇದನ್ನು ನಾವು ಹೇಗೆ ಅರ್ಥಮಾಡಿಕೊಳ್ಳಬೇಕು?

ಈಗ ನಾವು ಇನ್ನೊಂದು ವಾಕ್ಯವನ್ನು ಓದೋಣ –

**2 ಥೆಸಲೋನಿಕದವರಿಗೆ 2:7-8**

**"ಅಧರ್ಮವು ಈಗಲೂ ಗುಪ್ತವಾಗಿ ತನ್ನ ಕಾರ್ಯವನ್ನು ಸಾಧಿಸುತ್ತದೆ; ಆದರೆ ಇದುವರೆಗೆ ಅಡ್ಡಿಮಾಡುವವನು ತೆಗೆದುಬಿಡಲ್ಪಡುವ ತನಕ ಅದು ಗುಪ್ತವಾಗಿಯೇ ಇರುವದು. ಅವನು ತೆಗೆದು ಬಿಡಲ್ಪಟ್ಟ ಕೂಡಲೆ ಆ ಅಧರ್ಮಸ್ವರೂಪನು ಕಾಣಬರುವನು; ಅವನನ್ನು ಯೇಸು ಕರ್ತನು ತನ್ನ ಬಾಯ ಉಸುರಿನಿಂದ ಕೊಲ್ಲುವನು, ತನ್ನ ಪ್ರತ್ಯಕ್ಷತೆಯ ಪ್ರಕಾಶದಿಂದ ಸಂಹರಿಸುವನು."**

ಈಗ ಇಲ್ಲಿ ಅಪೋಸ್ತಲನನಾದ ಪೌಲನು ಕ್ರಿಸ್ತವಿರೋಧಿಯನ್ನು ಸೂಚಿಸುತ್ತಿದ್ದಾನೆ ಮತ್ತು ಅದನ್ನು "ಅಧರ್ಮ" ಮತ್ತು..... "ಅಧರ್ಮ ಸ್ವರೂಪನು" ಎಂದು ಕರೆಯುತ್ತಾನೆ.

ಆದರೆ ಅಪೋಸ್ತಲನು ಏನು ಹೇಳುತ್ತಿದ್ದಾನೆಂದು ಗಮನಿಸಿರಿ...... –

ಕ್ರಿಸ್ತವಿರೋಧಿಯು ಆತನ ದಿನಗಳಲ್ಲಿಯೇ ತನ್ನ ಕಾರ್ಯವನ್ನು ಸಾಧಿಸುತ್ತಿದ್ದಾನೆಂದು ಹೇಳುತ್ತಾನೆ –

.....ಆದಿ ಸಭೆಯಲ್ಲಿ ಮತ್ತು ......ಕರ್ತನಾದ ಯೇಸುವಿನ ಎರಡನೆಯ ಬರುವಿಕೆಯಲ್ಲಿ ಸಂಹರಿಸುವನು.... ಎಂದು ಹೇಳುತ್ತಾನೆ!

**".....ಅಧರ್ಮವು ಈಗಲೂ ಗುಪ್ತವಾಗಿ ತನ್ನ ಕಾರ್ಯವನ್ನು ಸಾಧಿಸುತ್ತದೆ..... ಅವನನ್ನು ಯೇಸು ಕರ್ತನು ಕೊಲ್ಲುವನು, ತನ್ನ ಪ್ರತ್ಯಕ್ಷತೆಯ ಪ್ರಕಾಶದಿಂದ ಸಂಹರಿಸುವನು."**

ಕ್ರಿಸ್ತವಿರೋಧಿಯ ಆರಂಭದ ಇದೇ ಸಾಕ್ಷಿಯನ್ನು ಅಪೋಸ್ತಲನಾದ ಯೋಹಾನನು ನಮಗೆ ಕೊಡುತ್ತಾನೆ.

ಹೌದು! ಇಬ್ಬರು ಅಪೋಸ್ತಲರು ನಮಗೆ ಹೇಳುವದೇನೆಂದರೆ.......
ಕ್ರಿಸ್ತವಿರೋಧಿಯು ತನ್ನ ಕಾರ್ಯವನ್ನು ಅಪೋಸ್ತಲರ ಅಥವಾ ಆದಿಸಭೆಯ ಕಾಲದಲ್ಲಿಯೇ ಆರಂಭಿಸಿದ್ದಾನೆ ಮತ್ತು ಅಪೋಸ್ತಲನಾದ ಪೌಲನು ಇನ್ನೂ ಹೇಳುವದೇನೆಂದರೆ..... ಈ ಕ್ರಿಸ್ತವಿರೋಧಿಯು ಕರ್ತನಾದ ಯೇಸು ಕ್ರಿಸ್ತನ ಎರಡನೆಯ ಬರುವಿಕೆಯಲ್ಲಿ ಸಂಹಾರವಾಗುವನು!!

**ಇದರ ಅರ್ಥವೇನೆಂದರೆ ಕ್ರಿಸ್ತವಿರೋಧಿಯ ವಯಸ್ಸು ಸುಮಾರು 2000 ವರ್ಷಗಳಿರಬೇಕು!**

## ಇದು ಹೇಗೆ ಸಾಧ್ಯ?


ಯಾವ ಮನುಷ್ಯನಾಗಲಿ 2000 ಸಾವಿರ ವಯಸ್ಸಿನ ವರೆಗೆ ಬದುಕ್ಕಿಲ್ಲ ಬದುಕಲೂ ಸಾಧ್ಯವಿಲ್ಲ!

ಆದ್ದರಿಂದ ಸತ್ಯವೇದದ ದೃಷ್ಟಿಯಿಂದ ಕ್ರಿಸ್ತವಿರೋಧಿಯು

**ಒಬ್ಬ ಪ್ರತ್ಯೇಕ ವ್ಯಕ್ತಿಯಾಗಿರಲು ಸಾಧ್ಯವಿಲ್ಲ!**

**ಹಾಗಾದರೆ ಕ್ರಿಸ್ತವಿರೋಧಿ ಅಂದರೆ ಯಾರು ಅಥವಾ ಏನು?**

**ಈ 2000 ವರ್ಷ ವಯಸ್ಸಿನ ಮತ್ತು..... ಈಗಲೂ..... ಬದುಕುತ್ತಿರುವ "ಕ್ರಿಸ್ತವಿರೋಧಿ"ಯು ಒಂದು ವ್ಯವಸ್ಥೆಯಾಗಿದೆ.**




ಹೌದು! ಮತ್ತು ಈ ವ್ಯವಸ್ಥೆಯಲ್ಲಿ ಅನೇಕ ಮಂದಿ ಅವಯವಗಳಿದ್ದಾರೆ, ಅಪ್ಪೋಸ್ತಲನಾದ ಯೋಹಾನನು ಅವರನ್ನು

"**.....ಕ್ರಿಸ್ತವಿರೋಧಿಗಳು ಬಹುಮಂದಿ**" ಎಂದು ಕರೆಯುತ್ತಾನೆ

**.....ಮತ್ತು ಈ ವ್ಯವಸ್ಥೆಯು ಕಾಲವು 2000 ವರ್ಷಗಳಿಂದ ಇದೆ!**

**ಈ ವ್ಯವಸ್ಥೆಯನ್ನು ಯಾರಾದರೂ ನೋಡಿದ್ದಾರಾ ಅಥವಾ ಗುರುತಿಸಿದ್ದಾರಾ?**

**ಇದಕ್ಕೆ ಉತ್ತರ ಇಲ್ಲ!!!**

## ಏಕೆ ?

ಏಕೆಂದರೆ ಅದು "ಗುಪ್ತವಾಗಿರುವ ಅಧರ್ಮಸ್ವರೂಪ"ವಾಗಿದೆ ಈಗ ನಾವು ಈ "ಗುಪ್ತವಾಗಿರುವ ಅಧರ್ಮಸ್ವರೂಪ"ದ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸೋಣ.

**ಮೊದಲನೆಯದಾಗಿ ಈ ಕ್ರಿಸ್ತವಿರೋಧಿ ಎಂಬ ಪದದ ಅರ್ಥವೇನು?**

ಸಾಮಾನ್ಯವಾದ ಅರ್ಥ ಏನೆಂದು ಇರಬಹುದೆಂದರೆ..... "ಕ್ರಿಸ್ತನಿಗೆ ಎದುರಾಗಿ" ಮತ್ತು ಯಾರ್ಯಾರು ಕ್ರಿಸ್ತನಿಗೆ ಎದುರಾಗಿದ್ದಾರೋ ಅವರನ್ನು ಸೂಚಿಸುತ್ತದೆ.

## ಆದರೆ ಕ್ರಿಸ್ತವಿರೋಧಿಯ ಅರ್ಥವನ್ನು ಹೀಗೆ ಅಂದುಕೊಳ್ಳಬೇಕಾ?

ಇಲ್ಲ! ಗ್ರೀಕ್ ಭಾಷೆ ಉಪಯೋಗಿಸಿರುವ ಈ ಪದವನ್ನು ನಾವು ಅಭ್ಯಾಸಮಾಡಿದಾಗ ಇದರ ಇನ್ನೊಂದು ಅರ್ಥ ನಮಗೆ ತಿಳಿಯುತ್ತದೆ. (ಮನವರಿಕೆಯಾಗುತ್ತದೆ).

ಹೌದು! ಸತ್ಯವೇದವು ಎರಡನೆಯ ಮತ್ತು ಬಹು ಮುಖ್ಯವಾದ ಅರ್ಥವನ್ನು ಸೂಚಿಸುತ್ತದೆ. ಮತ್ತು ಅದೇನೆಂದರೆ –

**........ಕ್ರಿಸ್ತನಿಗೆ ಬದಲಾಗಿ**

**........ಕ್ರಿಸ್ತನ ಸ್ಥಳ (ಪದವಿ)ಯನ್ನು ಪಡೆದುಕೊಳ್ಳುವದು.**

**........ಕಪಟ ಅಥವಾ ಕಳ್ಳ ಕ್ರಿಸ್ತನು.**

**(ಸ್ಟ್ರಾಂಗ್ಸ ಕನ್ಕಾರ್ಡರ್ನ್ಸ್ ಗ್ರೀಕ್ # 500 ಮತ್ತು 473 ಮತ್ತು 5547 ಅನ್ನು ಓದಿರಿ)**

ಆದ್ದರಿಂದ ಈ ಕ್ರಿಸ್ತವಿರೋಧಿಯ ವ್ಯವಸ್ಥೆ ಕೇವಲ ಕ್ರಿಸ್ತನಿಗೆ ವಿರೋಧಿ ಅಥವಾ ಎದುರಾಳಿ ಮಾತ್ರವಲ್ಲ ಆದರೆ ಅದಕ್ಕಿಂತಲೂ ಅಪಾಯಕಾರಿಯಾಗಿದ್ದು ಅದು ಕ್ರಿಸ್ತನಂತೆ ಮುಖವಾಡ ಹಾಕಿಕೊಂಡು ಕ್ರಿಸ್ತನನ್ನು ನಕಲು ಮಾಡುತ್ತಾನೆ ಅಥವಾ ಕಳ್ಳ ಕ್ರಿಸ್ತನಂತಿರುತ್ತಾನೆ.

**ಈ ಕಳ್ಳ ಕ್ರಿಸ್ತನ ವ್ಯವಸ್ಥೆ ಎಂದರೇನು?**

ಈಗ ನಾವು ಕೆಳಗಿನ ವಾಕ್ಯವನ್ನು ಓದೋಣ –

**ಮತ್ತಾಯ 24:15**

**"......ಹಾಳುಮಾಡುವ ಅಸಹ್ಯ ವಸ್ತುವು ಪವಿತ್ರಸ್ಥಾನದಲ್ಲಿ ನಿಂತಿರುವದನ್ನು......."**

ಹೌದು! ಇಲ್ಲಿ ನಾವು ನೋಡುವದೇನೆಂದರೆ ಈ ಕ್ರಿಸ್ತವಿರೋಧಿಯ ವ್ಯವಸ್ಥೆಯು "ಪವಿತ್ರಸ್ಥಾನದಲ್ಲಿ" ನಿಂತಿರುತ್ತದೆ.

## ಇದರ ಅರ್ಥವೇನು?

ನಾವು ಇನ್ನೊಂದು ವಾಕ್ಯವನ್ನು ಓದಿ ಅರ್ಥಮಾಡಿಕೊಳ್ಳೋಣ –

**2 ಥೆಸಲೋನಿಕದವರಿಗೆ 2:4**

**".......ಯಾವದು ದೇವರೆನಿಸಿಕೊಳ್ಳುತ್ತದೋ ಯಾವದು ಪೂಜೆ ಹೊಂದುತ್ತದೋ ಅದನ್ನೆಲ್ಲಾ ನಾಶನಕ್ಕೆ ಅಧೀನನಾದ ಆ ಪುರುಷನು ಎದುರಿಸಿ ಅದಕ್ಕಿಂತ ಮೇಲಾಗಿ ತನ್ನನ್ನು ತಾನೇ ಹೆಚ್ಚಿಸಿಕೊಂಡು ತಾನು ದೇವರೆಂದು ಹೇಳಿಕೊಂಡು ದೇವರ ಗರ್ಭಗುಡಿಯಲ್ಲೇ ಕೂತುಕೊಳ್ಳುತ್ತಾನೆ."**

ಇದನ್ನು ನೀವು ನೋಡಿದಿರಾ? ಇಲ್ಲಿ ಅದೇ ಕ್ರಿಸ್ತವಿರೋಧಿಯು "ದೇವರ ಗರ್ಭಗುಡಿಯಲ್ಲಿ" ಕೂತುಕೊಳ್ಳುತ್ತಾನೆ.

ಇಲ್ಲಿ "ಪವಿತ್ರ ಸ್ಥಾನ"ವನ್ನು "ದೇವರ ಗರ್ಭಗುಡಿ"ಯೆಂದು ಸೂಚಿಸಲಾಗಿದೆ ಮತ್ತು ಕರೆಯಲಾಗಿದೆ!

ಈ ಸ್ಥಳ ಎಂದರೇನು? ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**1 ಕೊರಿಂಥದವರಿಗೆ 3:16**

**"ನೀವು ದೇವರ ಆಲಯವಾಗಿದ್ದೀರೆಂದೂ........ನಿಮಗೆ ಗೊತ್ತಿಲ್ಲವೋ?"**

ಹೌದು! "ಆಲಯ"ವು ಸಭೆಯಾಗಿದ್ದು "ದೇವರ ಮನೆ"ಯಾಗಿದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**1 ತಿಮೊಥೆಯದವರಿಗೆ 3:15**

**"ದೇವರ ಮನೆಯಲ್ಲಿ ಅಂದರೆ ಜೀವಸ್ವರೂಪನಾದ ದೇವರ ಸಭೆಯಲ್ಲಿ ನಡೆದುಕೊಳ್ಳಬೇಕಾದ ರೀತಿಯು ನಿನಗೆ ಗೊತ್ತಾಗಬೇಕೆಂದು ಈ ಸಂಗತಿಗಳನ್ನು ಬರೆದಿದ್ದೇನೆ."**

ಆದ್ದರಿಂದ ಕ್ರಿಸ್ತವಿರೋಧಿಯ ವ್ಯವಸ್ಥೆಯು "ದೇವರ ಆಲಯ" ಅಥವಾ...... ಸಭೆಯೊಳಗೆ ಪ್ರವೇಶಿಸಿತು.

**ಈಗ ನಮಗೆ ಏಳುವ ಪ್ರಶ್ನೆ ಏನೆಂದರೆ......**

**ಇದು ಹೇಗಾಯಿತು ಮತ್ತು..... ಇದು ಯಾಕಾಯಿತು?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**2 ಥೆಸಲೋನಿಕದವರಿಗೆ 2:3**

**"ಯಾರೂ ಯಾವ ವಿಧದಲ್ಲಿಯೂ ನಿಮ್ಮನ್ನು ಮೋಸಗೊಳಿಸದಂತೆ ನೋಡಿಕೊಳ್ಳಿರಿ; ಯಾಕೆಂದರೆ ಮೊದಲು ಮತಭ್ರಷ್ಟತೆಯು ಉಂಟಾಗಿ ಅಧರ್ಮಸ್ವರೂಪನು ಬೈಲಿಗೆ ಬಂದ ಹೊರತು ಆ ದಿನವು ಬರುವದಿಲ್ಲ."**

**ಹೌದು! ಇಲ್ಲಿ ಅಪೋ.ಪೌಲನು......**

**ಹೇಗೆ ಮತ್ತು ಏಕಾಯಿತು ಎಂಬ ಪ್ರಶ್ನೆಗಳಿಗೆ ಉತ್ತರ ನೀಡುತ್ತಾನೆ!**

ಆತನು ಹೇಳುವದೇನೆಂದರೆ "ಅಧರ್ಮಸ್ವರೂಪ"ನಾದ–ಕ್ರಿಸ್ತವಿರೋಧಿಯು ಸಭೆಯಲ್ಲಿ ತನ್ನ ವ್ಯಕ್ತಪಡಿಸುವದಕ್ಕೆ ಮೊದಲು –

"........ಬೈಲಿಗೆ ಬರಬೇಕು" (ಬಿದ್ದು ಹೋಗುವದು)

ಏನಿದು "ಮೊದಲು ಬೈಲಿಗೆ ಬರಬೇಕು"?

ಸ್ವತಃ ಅಪ್ರೋಸ್ತಲನು ಈ ವಿಷಯವನ್ನು ಪ್ರವಾದನೆಯ ಮೂಲಕ ವಿವರಿಸಿರುವದನ್ನು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ –

**1 ತಿಮೊಥೆಯವರಿಗೆ 4:1**

**"ಆದರೂ ಮುಂದಣ ದಿನಗಳಲ್ಲಿ ಕೆಲವರು ವಂಚಿಸುವ ಆತ್ಮಗಳ ನುಡಿಗಳಗೂ ದೆವ್ವಗಳ ಬೋಧನೆಗಳಿಗೂ ಲಕ್ಷ್ಯಕೊಟ್ಟು ಕ್ರಿಸ್ತನಂಬಿಕೆಯಿಂದ ಭ್ರಷ್ಟರಾಗುವರೆಂದು ದೇವರಾತ್ಮನು ಸ್ಪಷ್ಟವಾಗಿ ಹೇಳುತ್ತಾನೆ."**

ಹೌದು! ಇಲ್ಲಿ ಅಪ್ರೋ.ಪೌಲನು ಪ್ರವಾದಿಸಿ ಹೇಳುವುದೇನೆಂದರೆ

...ಅವರು ಸತ್ಯವೇದದ ಜ್ಞಾನದಿಂದ "ಬೈಲಿಗೆ ಬರುವರು"

ಈ ಪ್ರವಾದನೆಯ ಅರ್ಥವೇನು?

ಬನ್ನಿ ನೋಡೋಣ –

## "ಮುಂದಣ ದಿನಗಳಲ್ಲಿ"

ಇದು 2-3 ದಶಕಗಳ (200 - 300 ವರ್ಷಗಳ)ನಂತರ ಕಾಲವನ್ನು ಸೂಚಿಸುತ್ತದೆ. ನಂತರ, ಪೌಲನು ಈ ಪತ್ರಿಕೆಯನ್ನು ಬರೆದನು

## "ನಂಬಿಕೆ"

ಇದು ಕ್ರೈಸ್ತರ ವಿಶೇಷವಾದ ನಂಬಿಕೆಯನ್ನು ಸೂಚಿಸುತ್ತದೆ –

......"ಅತಿ ಪರಿಶುದ್ಧವಾದ ಕ್ರಿಸ್ತನಂಬಿಕೆ" (ಯೂದನು :20)

ಮತ್ತು ....... "ಅಮೂಲ್ಯವಾದ ನಂಬಿಕೆ" ಎಂದು (2 ಪೇತ್ರನು 1:1) ಅಪ್ರೋ.ಪೇತ್ರನು ಕರೆಯುತ್ತಾನೆ.

ಹೌದು! ಈ ಎಲ್ಲಾ ಬೋಧನೆಗಳು ಮತ್ತು ಉಪದೇಶಗಳು ಸತ್ಯವೇದ ಆಧಾರಿತ ನಂಬಿಕೆಯಾಗಿದೆ

## "ವಂಚಿಸುವ ಆತ್ಮಗಳು"

ಇಲ್ಲಿ "ಆತ್ಮಗಳು" ಎಂಬ ಪದವು "ವಾಕ್ಯ" ಅಥವಾ "ಉಪದೇಶ"ವನ್ನು ಸೂಚಿಸುತ್ತದೆ.

ಏಕೆಂದರೆ ಸ್ವತಃ ಯೇಸುವೇ ಈ ರೀತಿಯಾಗಿ ನಮಗೆ ಉಪದೇಶಿಸಿದ್ದಾರೆ.......

**ಯೋಹಾನ 6:63 – "ಬದುಕಿಸುವಂಥದು ಅತ್ಮವೇ; ಮಾಂಸವು ಯಾವದಕ್ಕೂ ಬರುವದಿಲ್ಲ. ನಾನು ನಿಮಗೆ ಹೇಳಿರುವ ಮಾತುಗಳೇ ಆತ್ಮವಾಗಿಯೂ ಜೀವವಾಗಿಯೂ ಅವೆ."**

ಹೌದು! "ಮಾತುಗಳು (ವಾಕ್ಯಗಳು)" ಅಥವಾ ಬೋಧನೆಗಳು "ಆತ್ಮ"ವನ್ನು ಸೂಚಿಸುತ್ತದೆ.

"ಆತ್ಮಗಳು" ಎಂದರೆ ಬೊಧನೆಗಳ ಬಹುವಚನವನ್ನು ಸೂಚಿಸುತ್ತದೆ.

**ಈಗ "ವಂಚಿಸುವ" ಬೋಧನೆಗಳು ಎಂದರೇನು ?**

ಇದು ಬೋಧನೆಗಳು ಮತ್ತು ಉಪದೇಶಗಳು ಕೇಳುವದಕ್ಕೆ ಬಹಳ ಪರಿಶುದ್ಧತೆ ಮತ್ತು "ದೇವರ ಹಾಗೆ" ಇರುವದನ್ನು ಸೂಚಿಸುತ್ತದೆ.

**ಉದಾಹರಣೆ:** ಬ್ರಹ್ಮಚರ್ಯ ಮತ್ತು ಸನ್ಯಾಸಿನಿಯನ್ನು ಅನುಸರಿಸುವುದಕ್ಕೆ ಪ್ರತಿಜ್ಞೆಯನ್ನು ಮಾಡಿರುವ ಪಾದರಿ ಮತ್ತು "ನನ್ಸ್"ಗಳು ತಾವು ದೊಡ್ಡ ತ್ಯಾಗ ಮಾಡಿರುವದಾಗಿ ಅಂದುಕೊಂಡಿದ್ದಾರೆ, ಆದರೆ ದೇವಸೇವಕರ ವಾಕ್ಯದ ಬೋಧನೆಗಳಿಗೆ ವಿರುದ್ಧವಾಗಿದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –





**1 ತಿಮೊಥೆಯನಿಗೆ 3:2**

**"ಸಭಾಧ್ಯಕ್ಷನು ದೋಷಾರೋಪಣೆಯಿಲ್ಲದವನೂ ಏಕಪತ್ನಿಯುಳ್ಳವನೂ....."**

ನಂತರ ನಮ್ಮ ಕರ್ತನು ಶುಕ್ರವಾರದಂದು ಸತ್ತನು ಎಂದು ಗೌರವ ಸಲ್ಲಿಸುವದಕ್ಕಾಗಿ, ಆ ದಿನದಂದು ಮಾಂಸವನ್ನು ತಿನ್ನದೇ ಇರುವ ದಿನವಾಗಿ ಅನುಸರಿಸಲಾಗುತ್ತದೆ.

ಇದು ಬಹಳ "ಪರಿಶುದ್ಧ" ಎಂದು ತೋರಬಹುದು
ಆದರೆ ನಾವು ಆದಿಸಭೆಯಲ್ಲಿ ಅಪ್ಪೋಸ್ತಲರು ಮತ್ತು
ಶಿಶ್ಯರು ಅಂತಹ ಅನುಸರಣೆಯನ್ನು ಮಾಡಲಿಲ್ಲ
ಎಂದು ನೋಡುತ್ತೇವೆ
– ಮತ್ತು ನಿಶ್ಚಯವಾಗಿ ಅವರಿಗೆ ನಮಗಿಂತ ಚೆನ್ನಾಗಿ
(ಈ ವಿಷಯಗಳು)ಗೊತ್ತಿದೆ!

ನಂತರ ಇಂತಹ ಅನೇಕ, ಅನೇಕ ಆಕರ್ಷಕ ಅಥವಾ "ವಂಚಿಸುವ" ಬೋಧನೆಗಳು
ವಿಶ್ವಾಸಿಗಳನ್ನು ತಪ್ಪಾದದಾರ್ಮಿಕತೆ ಮತ್ತು ಪರಿಶುದ್ಧತೆಯ ಅರ್ಥಗಳನ್ನು ನೀಡಿ
ಅವರು ಪರಿಶುದ್ಧರು ಮತ್ತು "ದೇವರ ಕಡೆಯವರು"
ಎಂಬ ಮನೋಭಾವನೆಯನ್ನು ಉಂಟು ಮಾಡುತ್ತಿದ್ದರು!!

ಇವೆಲ್ಲವೂ ವಂಚಿಸುವ ಬೋಧನೆಗಳಾಗಿತ್ತು!!

## "ದೆವ್ವಗಳ ಬೋಧನೆಗಳು"

ಇದು ಸತ್ಯವೇದದಲ್ಲಿ ಕಾಣದಿರುವ ಬೋಧನೆಗಳು ಮತ್ತು ಉಪದೇಶಗಳನ್ನು
ಸೂಚಿಸುತ್ತದೆ. ಮತ್ತು ಇದನ್ನು ಅನ್ಯಜನರು, ಹೆಸರಿಗೆ ಮಾತ್ರ ಕ್ರೈಸ್ತರು ಮತ್ತು
ಸತ್ಯವನ್ನು ನಂಬದಿರುವವರನ್ನು ಸೂಚಿಸುತ್ತದೆ
**(ಕೀರ್ತನೆ 96:5)**

**ಉದಾಹರಣೆಗಳು**: ಲೋಕದಲ್ಲಿ ಹೆಸರಾಂತವಾಗಿರುವ ಉಪದೇಶಗಳು ಮತ್ತು
ಬೋಧನೆಗಳು – ಯಾವುದೆಂದರೆ:-

- ನಿರ್ಲಯತ್ವ ಅಥವಾ ನಾಶವೇ ಆಗದ ಮಾನವನ ಆತ್ಮ.
- ತ್ರೈಯೇಕತ್ವವುಳ್ಳ ದೇವರು ಮೂರು ವ್ಯಕ್ತಿಗಳಾಗಿದ್ದು ಮೂವರಿಗೂ
ಸಮಾನವಾದ ಬಲ, ಮಹಿಮೆಯಿದ್ದು
ಮೂವರಿಗೂ ಆರಂಭವೇ ಇಲ್ಲ ಎಂಬ ಬೋಧನೆಗಳು.

➡ ನರಕವೆಂಬದು ನಿತ್ಯನಿತ್ಯವಾಗಿ ಯಾತನೆ ಮತ್ತು ಚಿತ್ರಹಿಂಸೆಗಳನ್ನು ಕೊಡುವ ಸ್ಥಳ.

ಹೌದು! ಈ ಸತ್ಯವೇದದ ಜ್ಞಾನದಿಂದ "ಬಿದ್ದು ಹೋಗುವ" ಕಾಲವು ಎರಡನೆಯ ಮತ್ತು ಮೂರನೆಯ ಶತಕದಲ್ಲಿ
ನಡೆಯಿತು ಮತ್ತು ಸತ್ಯವೇದದ ಅಭ್ಯಾಸವನ್ನು ಮತಾಭಿಪ್ರಾಯದ ನಂಬಿಕೆಯಾಗಿ ಮಾರ್ಪಟಿತ್ತು –

ದೇವರವಾಕ್ಯದ ನಂಬಿಕೆಯ ಸಂಕ್ಷಿಪ್ತವರದಿ ಎಂದು ಹಕ್ಕುಸಾಧಿಸಿದರು!

ಈ ದೇವರ ವಾಕ್ಯವಾದ – ಸತ್ಯವೇದದ "ಜ್ಞಾನಹೀನವು" ನಾಶನಕ್ಕೆ ದಾರಿ ಮಾಡಿಕೊಟ್ಟಂತಾಯಿತೆಂದು
ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಹೋಶೇಯ 4:6**

**"ನನ್ನ ಜನರು ಜ್ಞಾನಹೀನರಾಗಿ ಹಾಳಾಗಿದ್ದಾರೆ."**

ಹೌದು! ಈ ನಾಶನವು ಸೈತಾನನ ವಂಚನೆಗಳಿಂದ ಬಿದ್ದು ಅತಿ ಪರಿಶುದ್ಧವುಳ್ಳ ನಂಬಿಕೆಯನ್ನು
ಕಳೆದುಕೊಂಡಿರುವದನ್ನು ಸೂಚಿಸುತ್ತದೆ.

ಆದ್ದರಿಂದ ಸತ್ಯವೇದದ ಜ್ಞಾನದಿಂದ "ಬಿದ್ದುಹೋಗುವ" ಮೂಲಕ ಸಭೆಯೊಳಗೆ ಈ ಕ್ರಿಸ್ತವಿರೋಧಿಯ ವ್ಯವಸ್ಥೆಯು ಪ್ರವೇಶಿಸುವದನ್ನು ನೋಡುತ್ತೇವೆ!

**ಆದ್ದರಿಂದ ಸತ್ಯವೇದದ ಪ್ರಕಾರ ಕ್ರಿಸ್ತವಿರೋಧಿಯು ಈ ಲೋಕಕ್ಕೆ ಮಾಡಬೇಕಾದದ್ದು ಸ್ವಲ್ಪವೇ ಮತ್ತು ಹೆಚ್ಚಾಗಿ (ಕ್ರಿಯೆ) ಮಾಡಬೇಕಾಗಿರುವದು "ಪವಿತ್ರ ಸ್ಥಳ" - "ದೇವರ ಆಲಯ" - ಸಭೆಗೆ ವಿರೋಧವಾಗಿದೆ!**

ಈ ಸತ್ಯಾಂಶವು ಪ್ರವಾದನಾ ಚಿತ್ರಣದ ಪ್ರಕಟನೆ ಪುಸ್ತಕದಲ್ಲಿ ಮತ್ತು **12**ನೇ ಅಧ್ಯಾಯನದಲ್ಲಿ ದೃಡವಾಗಿದೆ.

ನಾವು ಈ ಮುಖ್ಯವಾದ ಅಧ್ಯಾಯನದ ಪ್ರವಾದನೆಯ ವಾಕ್ಯಗಳನ್ನು ಒಂದೊಂದಾಗಿ ಕ್ರಿಸ್ತವಿರೋಧಿಯ ಭಾಗ **3**ರರಲ್ಲಿ ನೋಡಲ್ಲಿದ್ದೇವೆ.

ಆದರೆ ಇಂದು ಆರಂಭದಲ್ಲಿರುವ ಒಂದು ವಿಷಯವನ್ನು ಮಾತ್ರ ನೋಡಲ್ಲಿದ್ದೇವೆ –

**ಪ್ರಕಟನೆ 12:1**

**"......ಸೂರ್ಯನನ್ನು ಧರಿಸಿಕೊಂಡಿದ್ದ ಒಬ್ಬ ಸ್ತ್ರೀಯಿದ್ದಳು; ಆಕೆಯ ಕಾಲುಗಳ ಕೆಳಗೆ ಚಂದ್ರನಿದ್ದನು. ಆಕೆಯ ತಲೆಯ ಮೇಲೆ ಹನ್ನೆರಡು ನಕ್ಷತ್ರಗಳುಳ್ಳ ಒಂದು ಕಿರೀಟವಿತ್ತು"**

ಹೌದು! ಇಲ್ಲಿ ನಾವು ಬಹಳ ಭವ್ಯವಾಗಿ ವರ್ಣಿಸಿರುವ ಒಂದು "ಸ್ತ್ರೀಯ"ನ್ನು ಕುರಿತು ಓದುತ್ತೇವೆ!!





ನಂತರ ಒಂದು ವಿಷಯವನ್ನು ಕುರಿತು 2ನೇ ವಾಕ್ಯದಲ್ಲಿ ಓದುತ್ತೇವೆ –

**ವಾಕ್ಯ -2-** "ಆಕೆಯು ಗರ್ಭಿಣಿಯಾಗಿದ್ದು ಪ್ರಸವವೇದನೆಯಿಂದ ಸಂಕಟಪಡುತ್ತಾ ಕೂಗುತ್ತಿದ್ದಳು."

ಹೌದು! ಇಲ್ಲಿ ನಾವು ಈ "ಸ್ತ್ರೀ" ಗರ್ಭಿಣಿಯಾಗಿರುವದನ್ನು ಕುರಿತು ಓದುತ್ತೇವೆ!!

ನಂತರ ನಾವು – 5ನೇ ವಾಕ್ಯವನ್ನು ಓದುತ್ತೇವೆ –

**ವಾಕ್ಯ -5-** "......ಆಕೆ ಒಂದು ಗಂಡು ಮಗುವನ್ನು ಹೆತ್ತಳು; ಆ ಕೂಸು ಫಕ್ಕನೆ ದೇವರ ಬಳಿಗೂ ಆತನ ಸಿಂಹಾಸನದ ಬಳಿಗೂ ಎತ್ತಲ್ಪಟ್ಟಿತು."

ಹೌದು! ಆಕೆಯು ಗಂಡುಮಗುವನ್ನು ಹೆತ್ತು, ಆ ಕೂಸು "ಪಕ್ಕನೆ ದೇವರ ಬಳಿಗೂ ಎತ್ತಲ್ಪಟ್ಟಿತು."

ನಂತರ ನಾವು – 6 ನೇ – ವಾಕ್ಯದಲ್ಲಿ ಹೀಗೆ ಓದುತ್ತೇವೆ –

**ವಾಕ್ಯ -6-** "ಆ ಸ್ತ್ರೀಯು ಅರಣ್ಯಕ್ಕೆ ಓಡಿಹೋದಳು; ಅಲ್ಲಿ ಆಕೆಗೆ ಸಾವಿರದ ಇನ್ನೂರ ಅರವತ್ತು ದಿನಗಳವರೆಗೆ ಪೋಷಣೆಯಾಗಬೇಕೆಂದು ದೇವರು ಸ್ಥಳವನ್ನು ಸಿದ್ಧಮಾಡಿದ್ದನು."

ಹೌದು! ಇಲ್ಲಿ ಆ "ಸ್ತ್ರೀಯು" ಮಗುವನ್ನು ಬಿಟ್ಟು "ಅರಣ್ಯಕ್ಕೆ" ಓಡಿಹೋಗುತ್ತಾಳೆ ಮತ್ತು ಆಕೆ ಸಾವಿರದ ಇನ್ನೂರ ಅರವತ್ತು ದಿನಗಳ ವರೆಗೆ ಅಲ್ಲೇ ಇರುತ್ತಾಳೆ.

**ಆ 'ಸ್ತ್ರೀ' ಯಾರು?**

**ಮತ್ತು ಹೇಗೆ ಆಕೆಯು 'ಸೂರ್ಯನನ್ನು ಧರಿಸಿಕೊಳ್ಳಲು' ಸಾಧ್ಯ ಮತ್ತು ಆಕೆಯ 'ಕಾಲುಗಳ ಕೆಳಗೆ ಚಂದ್ರನಿರಲು' ಹೇಗೆ ಸಾಧ್ಯ?**

**ಮತ್ತು ಈ 'ಗಂಡುಮಗು' ಯಾರು?**

**ಮತ್ತು ಆಕೆ ಈ ಗಂಡುಮಗುವನ್ನು ಹೆತ್ತ ಮೇಲೆ ಯಾಕೆ ಅರಣ್ಯಕ್ಕೆ ಓಡಿಹೋಗಬೇಕು?**

**ಮತ್ತು ಈ 'ಸಾವಿರದ ಇನ್ನೂರ ಅರವತ್ತು ದಿನಗಳು' ಎಂದರೇನು?**



ಈ ವಾಕ್ಯವನ್ನು 1950ರಲ್ಲಿ ರೋಮನ್ ಕ್ಯಾಥೋಲಿಕ್ ಸಭೆಯವರು ಕಂಡುಹಿಡಿದರು ಮತ್ತು ಅವರು ಹಕ್ಕುಸಾಧಿಸುವದೇನೆಂದರೆ ಆ ಸ್ತ್ರೀ "ಮರಿಯಳಾಗಿದ್ದಾಳೆ" ಮತ್ತು "ದೇವರಬಳಿ" ಎಂಬ ಪದವು ಆಕೆಯು ಶರೀರಧಾರಿಯಾಗಿ ಪರಲೋಕದಲ್ಲಿದ್ದಾಳೆ (ಇದೇ ರೀತಿ ಅಪೋಸ್ತಲರ ಕೃತ್ಯಗಳು 1:9ರಲ್ಲಿ ಯೇಸು ಸಹ ಶರೀರಧಾರಿಯಾಗಿ ಪರಲೋಕದಲ್ಲಿದ್ದಾನೆ ಎನ್ನುತ್ತಾರೆ).

ಮತ್ತು "ಗಂಡುಮಗು"ವನ್ನು ಯೇಸು ಅಂದುಕೊಂಡಿದ್ದಾರೆ!

**ಇದು ನಿಜವಾಗಿದ್ದರೆ ಮಗುವಾಗಿದ್ದ ಯೇಸುವನ್ನು ಮರಿಯಳು ಯಾವಾಗ ಬಿಟ್ಟು ಅರಣ್ಯದಲ್ಲಿ**
**ಒಂದು ಸಾವಿರದ ಇನ್ನೂರ ಅರವತ್ತು ದಿವಸಗಳು ಇದ್ದಳು?**

**ಇದು ಎಂದಿಗೂ ನಡೆಯಲಿಲ್ಲ!**

**ಹಾಗಾದರೆ ಈ ವಾಕ್ಯದ ಅರ್ಥವೇನು?**

"ಸತ್ಯವಾಕ್ಯವನ್ನು ಸರಿಯಾಗಿ ಉಪದೇಶಿಸುವವನೂ ಆಗಿರು."

ಎಂಬ ವಾಕ್ಯಕನುಗುನವಾಗಿ ನಮಗೆ ಸತ್ಯಸ್ಥಿತಿ

ಗೊತ್ತಾಗುವದೇನೆಂದರೆ, ಇಲ್ಲಿ ಉಪಯೋಗಿಸಿರುವ ವಾಕ್ಯವು ಸಾಂಕೇತಿಕ ಭಾಷೆಯಾಗಿದೆ. ( **2 ತಿಮೊಥೆಯನಿಗೆ 2:15** )

ಈಗ ನಾವು ಈ ಸಂಕೇತಗಳ ಅರ್ಥಗಳನ್ನು ಕುರಿತು ನೋಡೋಣ –

## "ಸ್ತ್ರೀ"

### ಈ ಸ್ತ್ರೀ ಯಾರು?

ನಾವು ಕಲಿತುಕೊಂಡಿರುವದೇನೆಂದರೆ ರೋಮನ್ ಕ್ಯಾತೋಲಿಕ್ ಅವರ ನಂಬಿಕೆಯ ಪ್ರಕಾರ ಆ ಸ್ತ್ರೀಯು ಮರಿಯಳು. ಆದರೆ ಅದು ನಿಜವಲ್ಲ. ಹಾಗಾದರೆ ಆ ಸ್ತ್ರೀಯು ಯಾರಾಗಿರಬಹುದು?

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**2 ಕೊರಿಂಥದವರಿಗೆ 11:2 – – "ಯಾಕೆಂದರೆ ದೇವರಲ್ಲಿರುವಂಥ ಚಿಂತೆಯಿಂದಲೇ ನಾನು ನಿಮ್ಮ ವಿಷಯದಲ್ಲಿ ಚಿಂತಿಸುತ್ತೇನೆ. ನಿಮ್ಮನ್ನು ಕ್ರಿಸ್ತನೆಂಬ ಒಬ್ಬನೇ ಪುರುಷನಿಗೆ ಶುದ್ಧ ಕನ್ಯೆಯಂತೆ ಒಪ್ಪಿಸಬೇಕೆಂದು ನಿಮ್ಮನ್ನು ಆತನಿಗೆ ನಿಶ್ಚಯಮಾಡಿದೆನಲ್ಲಾ."**

**ಹೌದು! ಇಲ್ಲಿ ಸೂಚಿಸಿರುವ ಆ "ಸ್ತ್ರೀ"ಯು ಸಭೆಯಾಗಿರುವ ಯೇಸು ಕ್ರಿಸ್ತನ "ಮದುಮಗಳು"!!**

ಈಗ ನಾವು ಸಭೆಯ ವಿವರಣೆಯನ್ನು ಕುರಿತು ನೋಡೋಣ –

## "ಸೂರ್ಯನನ್ನು ಧರಿಸಿಕೊಂಡಿದ್ದ"

ಇದು ಸಭೆಯ – ಹೊದಿಕೆಯನ್ನು ವಿವರಿಸುತ್ತದೆ!

ಇದು "ಸೂರ್ಯನ" ಬೆಳಕನ್ನು ಹೊದಿಸಿಕೊಂಡಿದೆ!

"ಸೂರ್ಯನು" ಏನ್ನನ್ನು ಸೂಚಿಸುತ್ತದೆ?

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ –

**2 ಕೊರಿಂಥ 4:4 – "ಇವರಲ್ಲಿ ದೇವರ ಪ್ರತಿರೂಪವಾಗಿರುವ ಕ್ರಿಸ್ತನ ಪ್ರಭಾವವನ್ನು ತೋರಿಸುವ ಸುವಾರ್ತೆಯ ಪ್ರಕಾಶವು ಉದಯವಾಗಬಾರದೆಂದು ಈ ಪ್ರಪಂಚದ ದೇವರು ನಂಬಿಕೆಯಿಲ್ಲದವರ ಮನಸ್ಸನ್ನು ಮಂಕುಮಾಡಿದನು."**

ಹೌದು! ಸುವಾರ್ತೆಯ ಪ್ರಕಾಶವನ್ನು ಇಲ್ಲಿ "ಸೂರ್ಯನಿಗೆ ಸೂಚಿಸಲಾಗಿದೆ.

ಏಕೆಂದರೆ ಸೂರ್ಯನು ಈ ಲೋಕದ ಬೆಳಕಿಗೆ ಮೂಲಕಾರಣನಾಗಿದ್ದಾನೆ.

ಮತ್ತು ನಿಜವಾಗಿಯೂ ಹೌದು!!!!

ಸಭೆಯು ಅದ್ಭುತವಾದ ಬೆಳಕು ಮತ್ತು ಸುವಾರ್ತೆಯ ಜ್ಞಾನದಿಂದ "ಹೊದಿಕೆ"ಯಾಗಿದೆ ಮತ್ತು ಆವರಿಸಲ್ಪಟ್ಟಿದೆ – ಅದೇ ಈ ಹೊಸ ಒಡಂಬಡಿಕೆ

## "ನಂತರ ನಾವು ಇನ್ನೊಂದು ವಿಷಯವನ್ನು ನೋಡುತ್ತೇವೆ"

ಇಲ್ಲಿ "ಚಂದ್ರ" ಎಂಬುದು ಪ್ರತಿಬಿಂಬಿಸುವ ಬೆಳಕಾಗಿದೆ

.....ಅದರ ಸ್ವಂತ ಬೆಳಕಿನಿಂದಲ್ಲ ಎಂದು ಸೂಚಿಸುತ್ತದೆ!!

ಇಲ್ಲಿ ಸಭೆಗೆ ಪ್ರತಿಬಿಂಬಿಸುವ ಬೆಳಕು.... ಹಳೆಯ ಒಡಂಬಡಿಕೆಯಾಗಿದೆ. ಈ ಸುವಾರ್ತೆಯ ಬೆಳಕು ನೆರಳು, ಪ್ರವಾದನೆಗಳು ಮತ್ತು ಸಂಕೇತಗಳ ಮೂಲಕ ಪ್ರತಿಬಿಂಬಿಸುತ್ತದೆ.

### 'ಆಕೆಯ ಕಾಲುಗಳ ಕೆಳಗೆ' ಅಂದರೆ ಏನ್ನನ್ನು ಸೂಚಿಸುತ್ತದೆ?

ಇದು ಹಳೆಯ ಒಡಂಬಡಿಕೆಯು ಸಭೆಯನ್ನು ವಿಶ್ವಾಸದಲ್ಲಿ ಬಲವಾಗಿ " ನಿಲ್ಲು"ವದಕ್ಕೆ ಸಹಾಯಮಾಡುತ್ತದೆ.

ಏಕೆಂದರೆ ಸಭೆಗೆ ಇದರ ಜ್ಞಾನದಿಂದ ಬಹಳ ಉತ್ತೇಜನ ಉಂಟಾಗುತ್ತದೆ.

## "ಆಕೆಯ ತಲೆಯ ಮೇಲೆ ಹನ್ನೆರಡು ನಕ್ಷತ್ರಗಳ್ಳುಳ್ಳ ಒಂದು ಕಿರೀಟವಿತ್ತು"

ಇಲ್ಲಿ "ತಲೆ" ಎಂದರೆ ಕಲಿತುಕೊಳ್ಳುವ ಸ್ಥಳವನ್ನು ಸೂಚಿಸುತ್ತದೆ ಮತ್ತು "ಹನ್ನೆರಡು ನಕ್ಷತ್ರಗಳ್ಳುಳ್ಳ ಕಿರೀಟ"ವು ಬೆಳಕಿನ ಮೂಲವನ್ನು ಸೂಚಿಸುತ್ತದೆ. ಇದು ದೈವೀಕವಾಗಿ ನೇಮಕವಾದ ಬೆಳಕಿನ ದೂತರು ಅಥವಾ ಸಭೆಗೆ ಬೋಧಕರಾದ – ಹನ್ನೆರಡು ಅಪೊಸ್ತಲರನ್ನು ಸೂಚಿಸುತ್ತದೆ!!

ಈಗ ಆ "ಸ್ತ್ರೀಯು" ಗರ್ಭಿಣಿಯಾಗಿರುವಳೆಂದು ಬರೆದಿದೆ!!

**ಇದರ ಅರ್ಥವೇನು?**

**ಸಭೆಯು ಹೇಗೆ ಗರ್ಭಿಣಿಯಾಯಿತು??**

**ಇದು ಸಭೆಯಾಗಿರುವ ಶರೀರದೊಳಗೆ ಸ್ವಲ್ಪವೂ ಕಾಣದೆ ಹೊಸ ಜೀವವು (ಸೃಷ್ಟಿಯು) ಬೆಳವಣಿಗೆ ಹೊಂದುವದಕ್ಕೆ ಸಾಂಕೇತಿಕ ಚಿತ್ರಣವಾಗಿದೆ!**

ಇದೊಂದು ಸುಂದರವಾದ ಸಾಂಕೇತಿಕ ಭಾಷೆಯಾಗಿದೆ!!

ಇದು ಸಭೆಯ "ಶರೀರದೊಳಗೆ" ಕ್ರಿಸ್ತವಿರೋಧಿಯ ಗರ್ಭಧಾರಣೆ ಅಥವಾ ಆರಂಭದ ಸಾಂಕೇತಿಕ ಚಿತ್ರಣವನ್ನು ಸೂಚಿಸುತ್ತದೆ!

ಬೇಗನೆ ಆ "ಸ್ತ್ರೀಯು" ಒಂದು "ಗಂಡುಮಗುವನ್ನು" "ಹೆರುತ್ತದೆ" ಮತ್ತು

ಆ ಮಗುವನ್ನು ಬಿಟ್ಟು 1260ದಿವಸಗಳು ಅರಣ್ಯಕ್ಕೆ ಓಡಿ ಹೋಗುತ್ತಾಳೆ



ಈ "ಗಂಡುಮಗು" ಕ್ರಿಸ್ತವಿರೋಧಿಯ ಆರಂಭದ ಸ್ಥಿತಿಯನ್ನು ಸೂಚಿಸುತ್ತದೆ ಮತ್ತು ಇದಾದ ನಂತರ

"ಅಧರ್ಮಸ್ವರೂಪ" ನಾಗುತ್ತಾನೆ.

ಇದನ್ನು ನಾವು ಎರಡುವಾಕ್ಯಗಳನ್ನು ಹೋಲಿಸಿನೋಡಿ ದೃಡಪಡಿಸ ಬಹುದು –

**ಪ್ರಕಟನೆ 12:5 – "ಆಕೆ ಜನಾಂಗಗಳನ್ನು ಕಬ್ಬಿಣದ ಕೋಲಿನಿಂದ ಆಳಬೇಕಾದ ಒಂದು ಗಂಡು ಮಗುವನ್ನು ಹೆತ್ತಳು; ಆ ಕೂಸು ಫಕ್ಕನೆ ದೇವರ ಬಳಿಗೂ ಆತನ ಸಿಂಹಾಸನದ ಬಳಿಗೂ ಎತ್ತಲ್ಪಟ್ಟಿತು."**

**2 ಥೆಸಲೋನಿಕದವರಿಗೆ 2:3,4 – ".....ಯಾಕಂದರೆ ಮೊದಲು ಮತಭ್ರಷ್ಟತೆಯು ಉಂಟಾಗಿ ಅಧರ್ಮಸ್ವರೂಪನು ಬೈಲಿಗೆ ಬಂದ ಹೊರತು ಆ ದಿನವು ಬರುವದಿಲ್ಲ. ಯಾವದು ದೇವರೆನಿಸಿಕೊಳ್ಳುತ್ತದೋ ಯಾವದು ಪೂಜೆ ಹೊಂದುತ್ತದೋ ಅದನ್ನೆಲ್ಲಾ ನಾಶನಕ್ಕೆ ಅಧೀನನಾದ ಆ ಪುರುಷನು ಎದುರಿಸಿ ಅದಕ್ಕಿಂತ ಮೇಲಾಗಿ ತನ್ನನ್ನು ತಾನೇ ಹೆಚ್ಚಿಸಿಕೊಂಡು ತಾನು ದೇವರೆಂದು ಹೇಳಿಕೊಂಡು ದೇವರ ಗರ್ಭಗುಡಿಯಲ್ಲೇ ಕೂತುಕೊಳ್ಳುತ್ತಾನೆ."**

ಹೌದು! ಇದು ಬಹಳ ಸ್ಪಷ್ಟವಾಗಿದೆ!!

**ಕ್ರಿಸ್ತವಿರೋಧಿಯ ವ್ಯವಸ್ಥೆಯನ್ನು ಇಲ್ಲಿ ಸಾಂಕೇತಿಕವಾಗಿ ವಿಧವಿಧವಾದ ಬೆಳವಣಿಗೆಯ ಹಂತದಲ್ಲಿ ತೋರಿಸಲಾಗಿದೆ -**

- **"ಗರ್ಭಧಾರಣೆಯ ಹಂತ" (ಕಣ್ಣಿಗೆ ಕಾಣದೆ ಇರುವದು)**
- **"ಹುಟ್ಟು ಮತ್ತು ಬಾಲ್ಯದ ಹಂತ (ಕಣ್ಣಿಗೆ ಕಾಣುತ್ತದೆ ಆದರೆ ಬಲಹೀನತೆಯುಳ್ಳದ್ದಾಗಿದೆ)**
- **"ಯೌವನ"ದ ಹಂತ (ಕಣ್ಣಿಗೆ ಕಾಣುತ್ತದೆ ಮತ್ತು ಬಲಶಾಲಿಯಾಗಿದೆ)**

ಈ ವ್ಯವಸ್ಥೆಯು ಸಭೆಯ "ಶರೀರದೊಳಗೇ" ಉಂಟಾಯಿತೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**1 ಯೋಹಾನ 2:18,19 – "ಮಕ್ಕಳಿರಾ,...... ಈಗಲೂ ಕ್ರಿಸ್ತವಿರೋಧಿಗಳು ಬಹುಮಂದಿ ಎದ್ದಿದ್ದಾರೆ..... ಅವರು ನಮ್ಮನ್ನು ಬಿಟ್ಟು ಹೊರಟುಹೋದರು."**

ಹೌದು! ಇಲ್ಲಿ ಬಹಳ ಸ್ಪಷ್ಟವಾಗಿರುವದೇನೆಂದರೆ ಈ ವ್ಯವಸ್ಥೆ ಆರಂಭದ ಅಂಗದವರು ಸಭೆಯೊಳಗಿಂದ ಬಂದವರು – "ಆ ಸ್ತ್ರೀಯ ಶರೀರದಿಂದ ಬಂದವರು."

**ಈ ಕ್ರಿಸ್ತವಿರೋಧಿಯ ವ್ಯವಸ್ಥೆಯ ಹುಟ್ಟು (ಆರಂಭ) ಮತ್ತು ಅಭಿವೃದ್ಧಿ (ಬೆಳವಣಿಗೆ)ಯ ಬಗ್ಗೆ ಈ ಅಭ್ಯಾಸದಲ್ಲಿ ವಿವರವಾಗಿ ಬಹಿರಂಗವಾಗಿದೆ.**

"ಆದರೆ ಈ ಕೆಳಗಿನ ವಿಷಯವನ್ನು ಕುರಿತು ಏನು ಹೇಳೋಣ –

**'ಆಕೆ ಸಾವಿರದ ಇನ್ನೂರ ಅರವತ್ತು ದಿನಗಳವರೆಗೆ ಅರಣ್ಯದಲ್ಲೇ ಇರುತ್ತಾಳೆ'?**

**ಇದರ ಅರ್ಥವೇನು?**

ಇದು ಸಭೆಯು ತನ್ನನ್ನೇ ಕ್ರಿಸ್ತವಿರೋಧಿಯ ವ್ಯವಸ್ಥೆಯಿಂದ ಬೇರ್ಪಟ್ಟ ಕಾಲವನ್ನು ಸೂಚಿಸುತ್ತದೆ.

(**"ಅರಣ್ಯಕ್ಕೆ ಓಡಿಹೋಗುವದು"** ಎಂದರೆ ಮನಸ್ಸು ಮತ್ತು ಉದ್ದೇಶಗಳಲ್ಲಿ ಬೇರ್ಪಟ್ಟಿರುವದು – ಯಾವುದೇ ರೀತಿಯಲ್ಲಿ ಒಳಪಡದೆ ಇರುವದು)

ಮತ್ತೆ ಇದೇ ವಿಷಯವನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಪ್ರಕಟನೆ 12:14**

**"ಆ ಸ್ತ್ರೀಯು ಅರಣ್ಯದಲ್ಲಿದ್ದ ತನ್ನ ಸ್ಥಳಕ್ಕೆ ಹಾರಿಹೋಗುವದಕ್ಕಾಗಿ ಆಕೆಗೆ ದೊಡ್ಡ ಗರುಡಪಕ್ಷಿಯ ಎರಡು ರೆಕ್ಕೆಗಳು ಕೊಡಲ್ಪಟ್ಟವು. ಅಲ್ಲಿ ಒಂದು ಕಾಲ, ಎರಡು ಕಾಲ, ಅರ್ಧಕಾಲ......"**



ಹೌದು! ಇದೇ ವಿಷಯವನ್ನು ಬೇರೆ ರೀತಿಯಲ್ಲಿ ವರ್ಣಿಸಲಾಗಿದೆ!

ಕಾಲಗಳನ್ನು ವ್ಯತ್ಯಾಸವಾಗಿ ವಿವರಿಸಲಾಗಿದೆ.

**ಈ 'ಒಂದು ಕಾಲ, ಎರಡು ಕಾಲ, ಅರ್ಧ ಕಾಲ' ಎಂದರೇನು ?**

ನಾವು ಹಳೆಯ ಒಡಂಬಡಿಕೆಯಲ್ಲಿ ಇದನ್ನು ತಿಳಿಸಿರುವುದನ್ನು ನೋಡುತ್ತೇವೆ --

**ದಾನಿಯೇಲನು 7:25**

**"…..ಒಂದು ಕಾಲ ಎರಡು ಕಾಲ ಅರ್ಧಕಾಲ ಅವನ ಕೈವಶವಾಗಿರುವರು"**

ಇಲ್ಲಿ ನಾವು ದೇವ ಭಕ್ತರ ಮೇಲೆ ಕ್ರಿಸ್ತವಿರೋಧಿಯ ಅಧಿಕಾರದ ಕಾಲಗಳನ್ನು ಸೂಚಿಸುವದನ್ನು ನೋಡುತ್ತೇವೆ

ಆಂಗ್ಲ ಎನ್.ಐ.ವಿ. ಸತ್ಯವೇದದಲ್ಲಿರುವ ಅಡಿ ಟಿಪ್ಪಣಿಯಲ್ಲಿ **(foot note)**

ಈ "ಒಂದು ಕಾಲ ಎರಡು ಕಾಲ ಅರ್ಧಕಾಲ"ದ ಅರ್ಥಗಳೇನೆಂದರೆ

…. **3 ½** ವರ್ಷಗಳು –

"ಕಾಲ" ಅಂದರೆ ಒಂದು ವರ್ಷ ಎಂದರ್ಥ!

ಈಗ ಕ್ರಿಸ್ತವಿರೋಧಿಯ ಅಧಿಕಾರದ ಅನುಮತಿಯ ಕಾಲವನ್ನು ಈ ರೀತಿಯಾಗಿ ಮಾತ್ರವಲ್ಲದೆ ಇನ್ನೆರಡು ದೃಷ್ಟಿಕೋಣದಿಂದಲೂ ತೋರಿಸಲಾಗಿದೆ –

**ಪ್ರಕಟನೆ 12:6 – "ಆಕೆಗೆ ಸಾವಿರದ ಇನ್ನೂರ ಅರುವತ್ತು ದಿನಗಳವರೆಗೆ……"**

ಮತ್ತು –

**ಪ್ರಕಟನೆ 13:5**

**"…..ಮತ್ತು ನಾಲ್ವತ್ತೆರಡು ತಿಂಗಳ ಪರ್ಯಂತರ ತನ್ನ ಕಾರ್ಯಗಳನ್ನು ನಡಿಸುವ ಅಧಿಕಾರವೂ ಅದಕ್ಕೆ ಕೊಡಲ್ಪಟ್ಟಿತು."**

ಆದ್ದರಿಂದ ಕ್ರಿಸ್ತವಿರೋಧಿಯ ವ್ಯವಸ್ಥೆಗೆ ಅಧಿಕಾರದ ಕಾಲಾವಧಿಯ ಅನುಮತಿಯನ್ನು ಕುರಿತು ಮೂರು ವಿಧಗಳಲ್ಲಿ ತೋರಿಸಲಾಗಿದೆ!!

**ಅವೆಲ್ಲವೂ ಹೊಂದಿಕೆಯಾಗಿವೆಯೆ?**

ಬನ್ನಿ ನೋಡೋಣ –

**3 ½ ವರ್ಷಗಳು = 42 ತಿಂಗಳು = 1260 ದಿನಗಳು**

**(12+12+12+6)** **(42 X 30 ದಿನಗಳು)**

ಆದ್ದರಿಂದ "ಕಾಲ ಪ್ರವಾದನೆ"ಯು ಪರಿಪೂರ್ಣವಾಗಿ ಹೊಂದಿಕೆಯಾಗುತ್ತದೆ ಮತ್ತು ಮೂರು ರೀತಿಯಲ್ಲೂ ಒಂದಕ್ಕೊಂದು ಹೋಲಿಕೆಯಾಗುತ್ತದೆ!!

ಒಂದು "ಪ್ರವಾದನಾ" ವರ್ಷವು **360** "ಪ್ರವಾದನಾ ದಿನಗಳಿಗೆ" ಸಮವಾಗಿದೆ.

ಒಂದು "ಸೌರ"ಮಾನ ವರ್ಷವು **365 ¼** ದಿನಗಳಿವೆ (ದಿನಕ್ಕೆ ೨೪ ಗಂಟೆಗಳಿವೆ)

ಒಂದು "ಚಂದ್ರ"ಮಾನ ವರ್ಷವು **360**ಕ್ಕಿಂತ ಕಡಿಮೆ ದಿನಗಳಿವೆ.

**ಈ 1260 ದಿನಗಳ ಕಾಲವು "ಸೌರ"ಮಾನ ವರ್ಷದ ಲೆಕ್ಕವೂ ಅಲ್ಲ ಮತ್ತು "ಚಂದ್ರ"ಮಾನ ವರ್ಷದ ಲೆಕ್ಕವೂ ಅಲ್ಲ.**

**ಇದು ಕಾಲ ಪ್ರವಾದನೆಯಾಗಿದೆ!!**

**ಮತ್ತು ನಾವು ನೋಡುವದಾದರೆ ಎಲ್ಲಾ ಪ್ರವಾದನೆಗಳು ಮತ್ತು ಪ್ರವಾದನಾ ಕಾಲದ ಲೆಕ್ಕವೂ –**

**ಒಂದು ಪ್ರವಾದನಾ ದಿನ = ಒಂದು (ನೇರವಾದ) ವರ್ಷ**

**(ಯೆಹೆಜ್ಕೇಲನು 4:6 – "ವರುಷ ಒಂದಕ್ಕೆ ಒಂದು ದಿನದ ಮೇರೆಗೆ....." ಮತ್ತು ಅರಣ್ಯಕಾಂಡ 14:34 – "ನಾಲ್ವತ್ತು ದಿನಗಳಿಗೆ ಸಮನಾಗಿ, ನಾಲ್ವತ್ತು ವರುಷ" ಈ ಮೇಲಿನ ವಾಕ್ಯಗಳನ್ನು ಓದಿರಿ)**

**(ಆದ್ದರಿಂದ 1260 "ಪ್ರವಾದನಾ ದಿನಗಳು" = 1260 ನೇರವಾದ ವರ್ಷಗಳು! ಆದ್ದರಿಂದ ಸೈತಾನನ ಈ ಕ್ರಿಸ್ತವಿರೋಧಿಯ ವ್ಯವಸ್ಥೆಯು ಅದರ "ಕ್ರಿಸ್ತವಿರೋಧಿಯ ಆತ್ಮದೊಂದಿಗೆ" ಮೊದಲೇ ನೇಮಕವಾದ 1260 ವರ್ಷಗಳು ಅಧಿಕಾರ ನಡೆಸಲು ಅನುಮತಿಸಲಾಗಿತ್ತು.**

ಈ "ಕ್ರಿಸ್ತವಿರೋಧಿಯ ಆತ್ಮ" ಎಂದರೇನೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**1 ಯೋಹಾನನು 4:3**

"ಯೇಸುವನ್ನು ಒಪ್ಪದೆ ಇರುವ ಆತ್ಮವು ದೇವರಿಂದ ಪ್ರೇರಿತವಾದದ್ದಲ್ಲ; ಅದು ಕ್ರಿಸ್ತ ವಿರೋಧಿಯ ಆತ್ಮವಾಗಿದೆ".

ಇಲ್ಲಿ "ಆತ್ಮ" ಎಂಬ ಪದವು ಯೋಹಾನ **6:63**ರಲ್ಲಿ ಹೇಳಿರುವ ಆತ್ಮ"ವಾಗಿದೆ ಅಂದರೆ ಅದು..... "ಬೋಧನೆ"ಗಳಾಗಿವೆ.

"ಕ್ರಿಸ್ತವಿರೋಧಿಯ ಆತ್ಮ" ಅಂದರೆ ಕ್ರಿಸ್ತವಿರೋಧಿ ವ್ಯವಸ್ಥೆಯ ಸುಳ್ಳು ಬೋದನೆಗಳು ಮತ್ತು ಸುಳ್ಳು ಉಪದೇಶಗಳಾಗಿವೆ.

ನಾವು ಈ ವ್ಯವಸ್ಥೆ ಮತ್ತು ಅದರ ಬೋಧನೆಗಳು ಮತ್ತು ಉಪದೇಶಗಳು ಹೇಗೆ ಸ್ಥಾಪಿತವಾಯಿತೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**2 ಥೆಸಲೋನಿಕದವರಿಗೆ 2:9** – ಈ ಕ್ರಿಸ್ತವಿರೋಧಿಯ ವ್ಯವಸ್ಥೆಯು **"ಮೋಸಗೊಳಿಸುವ ಸಕಲವಿಧವಾದ ಮಹತ್ಕಾರ್ಯ ಸೂಚಕಕಾರ್ಯ ಅದ್ಭುತಕಾರ್ಯ....**"ಗಳನ್ನು ಮಾಡುತ್ತದೆ.

ಹೌದು! ಸೈತಾನನು ಈ ಕ್ರಿಸ್ತವಿರೋಧಿಯ ವ್ಯವಸ್ಥೆಯ ಸುಳ್ಳುಬೋಧನೆಗಳ ನಂಬಿಕೆಯನ್ನು ಸ್ಥಾಪಿಸಲು ಮಹತ್ಕಾರ್ಯ ಮತ್ತು ಅದ್ಭುತ ಕಾರ್ಯಗಳನ್ನು ಉಪಯೋಗಿಸುತ್ತಾನೆ!!

**ಹೌದು! ಈ 2000 ವರ್ಷ ವಯಸ್ಸಿನ ಕ್ರಿಸ್ತವಿರೋಧಿಯ ವ್ಯವಸ್ಥೆಯನ್ನು ನಿಮ್ಮ ಸಭೆಯೊಳಗೆ ನೀವು ನೋಡಿದ್ದೀರಾ?**

**ಇದಕ್ಕೆ ನೀವು – ಇಲ್ಲ ಎಂದು ಉತ್ತರಿಸುತ್ತೀರಾ?**

**ಆಹ್! ಅದು ಹೇಗೆ ಮತ್ತು ಏಕೆ ?**



ಏಕೆಂದರೆ "ಅಧರ್ಮವು ಗುಪ್ತವಾಗಿ" ತನ್ನ ಕಾರ್ಯವನ್ನು ಸಾಧಿಸುತ್ತದೆ **(2 ಥೆಸ 2:7)**

.....ಮತ್ತು ಎಲ್ಲಾ ರಹಸ್ಯಗಳಂತೆಯೇ ಇದನ್ನೂ..... ಸಹ ಸುಲಭವಾಗಿ ಗ್ರಹಿಸಲು ಸಾಧ್ಯವಿಲ್ಲ!


**ನಾವು ಈ 'ರಹಸ್ಯ (ಗುಪ್ತ)'ವಾದದನ್ನು ಮತ್ತು ಅದರ ಕಾಲವಾದ 1260 ವರ್ಷಗಳನ್ನು ಗುರುತು ಹಿಡಿಯಲು ಸಾಧ್ಯವೇ?**

**ಆ ಕಾಲವು ಮುಗಿದು ಹೋಯಿತೇ, ಅಥವಾ ಅದು ಭವಿಷ್ಯದಲ್ಲಿ ಸಂಭವಿಸುತ್ತದೆಯೇ, ಅಥವಾ ಈಗ ಅದು ನಡೆಯುತ್ತಲಿದೆಯೇ?**

**"666' ಸಂಖ್ಯೆಯ ಅರ್ಥ ಮತ್ತು ಸೂಚನೆಗಳೇನು?**




ನಾವು ಮುಂದಿನ ಪಾಠವಾದ ಕ್ರಿಸ್ತವಿರೋಧಿಯ ಅಭ್ಯಾಸದ ಭಾಗ – 2 ರಲ್ಲಿ ಈ ಉತ್ತರಗಳನ್ನು ಕಂಡು ಹಿಡಿಯಲು ಪ್ರಯತ್ನಿಸೋಣ. ಅದಲ್ಲದೆ ಈ "ಗುಪ್ತವಾಗಿರುವ ಅಧರ್ಮ ಸ್ವರೂಪ"ನನ್ನು ಕಂಡುಹಿಡಿಯಲು ಪ್ರಯತ್ನಿಸೋಣ ಮತ್ತು ಯಾರು ಈ ಕ್ರಿಸ್ತವಿರೋಧಿಯ ವ್ಯವಸ್ಥೆ ಎಂದು ಗುರುತು ಹಿಡಿಯಲು ಪ್ರಯತ್ನಿಸೋಣ.



.....ಆಮೆನ್.....

For Private Circulation Only

NOT FOR SALE




For more Subjects contact: MESSENGERS OF CHRIST E-mail: thekingdom1_6@yahoo.com